KAKP200001462016

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಯವರ ನ್ಯಾಯಾಲಯ, ಕುಷ್ಟಗಿ.**

**ದಿನಾಂಕಃ 01 ನೇ ಜೂನ್, 2026**

**ಅಪರಾಧಿಕ ಪ್ರಕರಣ ಸಂಖ್ಯೆಃ40/2016**

| | | |
|---|---|---|
| ಫಿರ್ಯಾದುದಾರರು | ಃ | ಸರ್ಕಾರದ ಪರವಾಗಿ,<br>ಆರಕ್ಷಕ ಉಪನಿರೀಕ್ಷಕರು,<br>ಹನಮಸಾಗರ ಪೊಲೀಸ್ ಠಾಣೆ,<br>ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ |

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

| | | |
|---|---|---|
| ಆರೋಪಿ 1 | ಃ | ಕಳಕಪ್ಪ |
| ತಂದೆ | ಃ | ಭೀಮಪ್ಪ ಬೇವಿನಕಟ್ಟಿ |
| ವಯಸ್ಸು | ಃ | 68 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ | ಃ | ನರಸಾಪುರ ಗ್ರಾಮ,<br>ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ |

| | | |
|---|---|---|
| ಆರೋಪಿ 2 | : | ಗಂಗಮ್ಮ |
| ಗಂಡ | : | ಕಳಕಪ್ಪ ಬೇವಿನಕಟ್ಟಿ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ನರಸಾಪುರ ಗ್ರಾಮ,<br>ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ |

**(1 ಮತ್ತು 2 ನೇ ಆರೋಪಿತರ ಪರ ಶ್ರೀ.ಎಸ್.ಎನ್.ಪಿ., ವಕೀಲರು)**

| | | |
|---|---|---|
| ಅಪರಾಧ ನಡೆದ ದಿನಾಂಕ | : | 28.06.2015 |
| ಅಪರಾಧ ವರದಿಯಾದ ದಿನಾಂಕ | : | 01.07.2015 |
| ಆರೋಪಿಯು ದಸ್ತಗಿರಿಯಾದ ದಿನಾಂಕ | : | ಜಾಮೀನಿನ ಮೇಲೆ ಇರುತ್ತಾರೆ |
| ಅಂತಿಮವರದಿ ಸಲ್ಲಿಸಿದ ದಿನಾಂಕ | : | 31.07.2015 |
| ದೋಷಾರೋಪಣೆ ರಚಿಸಿದ ದಿನಾಂಕ | : | 09.03.2017 |
| ಫಿರ್ಯಾದುದಾರರ ಹೆಸರು | : | ಮಲ್ಲಪ್ಪ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 11.04.2018 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 25.03.2026 |
| ತೀರ್ಪನ್ನು ಖಾಯ್ದಿರಿಸಿದ ದಿನಾಂಕ | : | 18.05.2026 |
| ತೀರ್ಪನ್ನು ಘೋಷಿಸಿದ ದಿನಾಂಕ | : | 01.06.2026 |
| ಅಪರಾಧ ಕಾಯ್ದೆ ಮತ್ತು ಕಲಂ | : | ಭಾರತೀಯ ದಂಡ ಸಂಹಿತೆ ಕಲಂ.323, 324, 341, 504 ಮತ್ತು 506 ಸಹ ಕಲಂ.34 |
| ಶಿಕ್ಷೆ ಆದೇಶ ವಿಧಿಸಿದ ದಿನಾಂಕ ಯಾವುದಾದರೂ ಇದ್ದರೆ | | -- |

| ಆರೋಪಿತರ ಶ್ರೇಣಿ | ಆರೋಪಿತರ ಹೆಸರು | ಬಂಧನದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆಯಾದ ದಿನಾಂಕ | ಆರೋಪಿತರ ಮೇಲೆ ಆಪಾದಿಸಲಾದ ಅಪರಾಧಗಳು | ಖುಲಾಸೆಯೇ ಅಥವಾ ಶಿಕ್ಷೆಯೇ | ಶಿಕ್ಷೆವಿಧಿಸಲಾಗಿದೆಯೇ | ದಂ.ಪ್ರ.ಸಂ. ಕಲಂ 428 ರ ರೀತ್ಯಾ ವಿಚಾರಣೆಯ ಸಮಯದಲ್ಲಿ ಬಂಧನಕ್ಕೊಳಗಾದ ಅವಧಿ |
|---|---|---|---|---|---|---|---|
| **1** | ಕಳಕಪ್ಪ | ಇಲ್ಲ | -- | ಭಾ.ದಂ.ಸಂ.ಕಲಂ 427, 427, 504, 506 ಸಹಕಲಂ 34 | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |
| **2** | ಗಂಗಮ್ಮ | ಇಲ್ಲ | -- | ಭಾ.ದಂ.ಸಂ.ಕಲಂ 427, 427, 504, 506 ಸಹಕಲಂ 34 | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |

**(ಮಹಾಂತೇಶ ಚೌಲಗಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,ಗಳು ಕುಷ್ಟಗಿ.**

# **ತೀರ್ಪು**

ಆರೋಪಿತರು ಭಾರತ ದಂಡ ಸಂಹಿತೆ ಕಲಂ.427, 447 504 ಮತ್ತು 506 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಆರಕ್ಷಕ ಉಪನಿರೀಕ್ಷಕರು, **ಹನಮಸಾಗರ ಪೊಲೀಸ್ ಠಾಣೆ**ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶಃ**

ದಿನಾಂಕ **28.06.2015** ರಂದು ಮಧ್ಯಾಹ್ನ **12.00** ಗಂಟೆಯ ಸುಮಾರಿಗೆ ಹಿರೇಮನ್ನಾಪುರ ಗ್ರಾಮ ಸೀಮಾದಲ್ಲಿ ಜಮೀನು ಸರ್ವೆ ಸಂಖ್ಯೆ:**50** ಹಿಸ್ಸಾ**-6** ವಿಸ್ತೀರ್ಣ **2** ಎಕರೆ **25** ಗುಂಟೆ ಜಮೀನಿನಲ್ಲಿ ಚಾಸಾ**.1,** ಚಾಸಾ**.4** ಮತ್ತು ಚಾಸಾ**.5** ರವರು ಕೆಲಸ ಮಾಡುತ್ತಿರುವಾಗ**,** ಆರೋಪಿತರು ಸಮಾನ ಉದ್ದೇಶದಿಂದ ಕೂಡಿಕೊಂಡು ಚಾಸಾ**.1** ರವರ ಹೊಲದಲ್ಲಿ ಅತಿಕ್ರಮ ಪ್ರವೇಶ

ಮಾಡಿ ಚಾಸಾ.**1** ರವರು ಬೆಳೆದ ಮೆಕ್ಕೆ ಜೋಳದ ಬೆಳೆಯನ್ನು ಎತ್ತಿನ ಗಳೆವು ತೆಗೆದುಕೊಂಡು ಅಡ್ಡಲಾಗಿ ಹರಗಿ ಸುಮಾರು ರೂ.**30,000/-** ಬೆಲೆ ಬಾಳುವ ಬೆಳೆಯನ್ನು ನಾಶಪಡಿಸಿ, **1** ನೇ ಆರೋಪಿತನು ಚಾಸಾ.**1** ರವರಿಗೆ ಈ ಸಾರೆ ಗೋವಿನ ಜೋಳ ಹರಗಿ ಲುಕ್ಸಾನ ಮಾಡಿವಿ ಏನ ಹರಕೊಂತಿ ಹರಕೋ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ ಶಾಂತಿಭಂಗವನ್ನುಂಟು ಮಾಡಿ ಮುಂದಿನ ಸಾರೆ ನಿಮ್ಮನ್ನೆ ಕೊಲೆ ಮಾಡಿ ಬಿಡುತ್ತೇವೆ ಎಂದು ಚಾಸಾ.**1** ರವರ ಮನಸ್ಸಿನಲ್ಲಿ ಅಪರಾಧಿಕ ಭಯೋತ್ಪಾದನೆ ಮೂಡಿಸಿ ಜೀವ ಬೆದರಿಕೆ ಹಾಕಿದ್ದು ಇರುತ್ತದೆ ಅಂತಾ ಪೊಲೀಸ್ ಉಪ ನಿರೀಕ್ಷಕರು, ತಾರವರಗೇರಾ ಪೊಲೀಸ್ ಠಾಣೆರವರು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ **ಕಲಂ.427, 447 504 ಮತ್ತು 506 ಸಹ ಕಲಂ.34 ರಡಿಯಲ್ಲಿ** ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ **ಹನಮಸಾಗರ** ಪೊಲೀಸರು, ತಮ್ಮ ಠಾಣಾ ಅಪರಾಧಿಕ ಕ್ರಮ ಸಂಖ್ಯೆ **64/2015** ಭಾರತ ದಂಡ ಸಂಹಿತೆ **ಕಲಂ.427, 447 504 ಮತ್ತು 506 ಸಹ ಕಲಂ.34 ರಡಿಯಲ್ಲಿ** ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

**4.** ತನಿಖಾಧಿಕಾರಿಗಳು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ, ಪಂಚರ ಸಮಕ್ಷಮ ಸ್ಥಳ ಮಹಜರನ್ನು ತಯಾರಿಸಿ, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ **ಕಲಂ.427, 447 504 ಮತ್ತು 506 ಸಹ ಕಲಂ.34 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**5.** ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾರತ ದಂಡ ಸಂಹಿತೆ **ಕಲಂ.427, 447 504 ಮತ್ತು 506 ಸಹ ಕಲಂ.34 ರಡಿಯಲ್ಲಿ**

ಮಾಡಲಾದ ಅಪರಾಧದ ಬಗ್ಗೆ ಆರೋಪಿತರ ವಿರುದ್ಧ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಂಡು ಮತ್ತು ಪ್ರಕರಣವನ್ನು ನೋಂದಾಯಿಸಿಕೊಂಡು ಸಮನ್ಸ್ ಜಾರಿಮಾಡಿದ್ದು, ಅದರಂತೆ ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು ತದನಂತರ ಅಪರಾಧಿಕ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನಾ ದಾಖಲೆಗಳನ್ನು ಪೂರೈಸಿ, ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿರುತ್ತದೆ.

**6.** ಆರೋಪಿತರ ವಾದವನ್ನು ಆಲಿಸಿದ ನಂತರ ಭಾರತ ದಂಡ ಸಂಹಿತೆ **ಕಲಂ.427, 447 504 ಮತ್ತು 506 ಸಹ ಕಲಂ.34 ರಡಿಯಲ್ಲಿ** ದೋಷಾರೋಪಣೆಯನ್ನು ಸಿದ್ಧಪಡಿಸಿ, ಓದಿ ಹೇಳಲಾಗಿ ಆರೋಪಿತರು ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಮತ್ತು ವಿಚಾರಣೆಯಾಗಬೇಕೆಂದು ಕೋರಿರುತ್ತಾರೆ.

**7.** ಅಭಿಯೋಜನೆ ಪರ ಪ್ರಕರಣವನ್ನು ರುಜುವಾತು ಪಡಿಸಲು ಒಟ್ಟು **7** ಸಾಕ್ಷಿಗಳ ಪೈಕಿ **5** ಸಾಕ್ಷಿಗಳನ್ನು **ಪ್ರಾಸಾ-1** ರಿಂದ **5** ಎಂದು, **2** ದಾಖಲೆಗಳನ್ನು ಕ್ರಮವಾಗಿ **ನಿಪಿ-1 ಮತ್ತು 2** ಎಂದು ಮತ್ತು ಮುದ್ದೆ ಮಾಲು-**1 ಮತ್ತು 2** ಎಂದು **ಗುರುತಿಸಲಾಯಿತು. ಚಾಸಾ.2 ಮತ್ತು ಚಾಸಾ.7** ರವರು **ಮೃತಪಟ್ಟಿದ್ದರಿಂದ ಸದರಿ ಪ್ರಕರಣದಲ್ಲಿ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ.**

**8.** ಅಭಿಯೋಜನೆ ಪ್ರಕರಣ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರ ವಿರುದ್ದ ಯಾವುದೇ ವ್ಯತಿರಿಕ್ತ ಸಾಕ್ಷ್ಯಗಳು ಕಂಡುಬಂದಿರುವದರಿಂದ ಅಪರಾಧಿಕ ಪ್ರಕಿಯಾ ಸಂಹಿತೆಯ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರು ಅಭಿಯೋಜನೆ ಪ್ರಕರಣದ ಸಾಕ್ಷಿದಾರರು ನುಡಿದಿರುವ ಸಾಕ್ಷಿಯನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿಗಳು ಇರುವುದಿಲ್ಲ ಎಂದು ಹೇಳಿರುತ್ತಾರೆ.

**9.** ಅಭಿಯೋಜನೆಯು ಈ ಕೆಳಕಂಡ ಅಂಶಗಳನ್ನು ಸಂಶಯಾತೀತವಾಗಿ ನಿರೂಪಿಸುವುದೇಃ

**1.** ದಿನಾಂಕ **28.06.2015** ರಂದು ಮಧ್ಯಾಹ್ನ **12.00** ಗಂಟೆಯ ಸುಮಾರಿಗೆ ಹಿರೇಮನ್ನಾಪುರ ಗ್ರಾಮ ಸೀಮಾದಲ್ಲಿ ಜಮೀನು ಸರ್ವೆ ಸಂಖ್ಯೆ:**50** ಹಿಸ್ಸಾ-**6** ವಿಸ್ತೀರ್ಣ **2** ಎಕರೆ **25** ಗುಂಟೆ ಜಮೀನಿನಲ್ಲಿ ಚಾಸಾ.**1,** ಚಾಸಾ.**4** ಮತ್ತು ಚಾಸಾ.**5** ರವರು ಕೆಲಸ ಮಾಡುತ್ತಿರುವಾಗ**,** ಆರೋಪಿತರು ಸಮಾನ ಉದ್ದೇಶದಿಂದ ಕೂಡಿಕೊಂಡು ಚಾಸಾ.**1** ರವರ ಹೊಲದಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದು**,** ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ.**447** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ**?**

**2.** ಈ ಮೇಲೆ ಹೇಳಿದ ದಿನ**,** ಸಮಯ ಹಾಗೂ ಸ್ಥಳದಲ್ಲಿ ಅಪರಾಧಿಕ ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಕೂಡಿಕೊಂಡು**,** ಆರೋಪಿತರು ಚಾಸಾ.**1** ರವರು ಬೆಳೆದ ಮೆಕ್ಕೆ ಜೋಳದ ಬೆಳೆಯನ್ನು ಅಡ್ಡಲಾಗಿ ಹರಗಿ ಸುಮಾರು ರೂ.**30,000/-** ಬೆಲೆ ಬಾಳುವ ಬೆಳೆಯನ್ನು ನಾಶಪಡಿಸಿದ್ದು**,** ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ.**427** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಿದೆಯೇ**?**

**3.** ಈ ಮೇಲೆ ಹೇಳಿದ ದಿನ**,** ಸಮಯ ಹಾಗೂ ಸ್ಥಳದಲ್ಲಿ ಅಪರಾಧಿಕ ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಕೂಡಿಕೊಂಡು**, 1** ನೇ ಆರೋಪಿತನು ಚಾಸಾ.**1** ರವರಿಗೆ ಈ ಸಾರೆ ಗೋವಿನ ಜೋಳ ಹರಗಿ ಲುಕ್ಸಾನ ಮಾಡಿವಿ ಏನ ಹರಕೊಂತಿ ಹರಕೋ ಎಂದು ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ ಶಾಂತಿಭಂಗವನ್ನುಂಟು ಮಾಡಿದ್ದು**,** ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ **504** ಸಹವಾಚಕ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು

ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ**?**

**4.** ಈ ಮೇಲೆ ನಮೂದಿಸಿದ ದಿನಾಂಕ**,** ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಚಾಸಾ**.1** ರವರಿಗೆ ಮುಂದಿನ ಸಾರೆ ನಿಮ್ಮನ್ನೆ ಕೊಲೆ ಮಾಡಿ ಬಿಡುತ್ತೇವೆ ಎಂದು ಚಾಸಾ**.1** ರವರ ಮನಸ್ಸಿನಲ್ಲಿ ಅಪರಾಧಿಕ ಭಯೋತ್ಪಾದನೆ ಮೂಡಿಸಿ ಜೀವ ಬೆದರಿಕೆ ಹಾಕಿದ್ದು**,** ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506** ಸಹ ಕಲಂ **34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಿದೆಯೇ**?**

**5.** ಯಾವ ಆದೇಶ?

**10.** ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರವಾಗಿ ಶ್ರೀ.ಎಸ್.ಎನ್.ಪಿ., ವಕೀಲರ ವಾದವನ್ನು ಆಲಿಸಲಾಯಿತು.

**11.** ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ 1 ಃ - ನಕಾರಾತ್ಮಕವಾಗಿ

ಅಂಶ 2 ಃ - ನಕಾರಾತ್ಮಕವಾಗಿ

ಅಂಶ 3 ಃ - ನಕಾರಾತ್ಮಕವಾಗಿ

ಅಂಶ 4 **ಃ** - ನಕಾರಾತ್ಮಕವಾಗಿ

ಅಂಶ 5 **ಃ** - ಅಂತಿಮ ಆದೇಶದಂತೆ,

ಈ ಕೆಳಕಾಣಿಸಿರುವ ಕಾರಣಗಳಿಗಾಗಿ

## ಕಾರಣಗಳು

**12.** <u>ಅಂಶ **1** ರಿಂದ **4:**</u>**-** ಈ ನಾಲ್ಕು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಮತ್ತು ಸಾಕ್ಷ್ಯ ಹಾಗೂ ಸಂಗತಿಗಳ ಪುನರಾವರ್ತನೆಯನ್ನು

ತಪ್ಪಿಸುವ ಸಲುವಾಗಿ ಈ ಮೇಲಿನ ನಾಲ್ಕು ಅಂಶಗಳನ್ನು ಏಕಕಾಲಕ್ಕೆ ಚರ್ಚಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

**13. ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದಂತಹ ಆರೋಪವನ್ನು ರುಜುವಾತು ಪಡಿಸಲು ಫಿರ್ಯಾದಿಯಾದ ಚಾಸಾ-1/ಮಲ್ಲಪ್ಪ ಇವರನ್ನು ಪ್ರಾಸಾ-1 ಎಂದು ವಿಚಾರಣೆಗೊಳಪಡಿಸಿರುತ್ತಾರೆ.** ಪ್ರಾಸಾ-1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ನನಗೆ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಆಗಬೇಕು. ಆರೋಪಿತರು ದಿನಾಂಕ:28.06.2015 ರಂದು 12-00 ಗಂಟೆಗೆ ನಮ್ಮ ಹೊಲದಲ್ಲಿ ಬೆಳೆದಿದ್ದ ಗೋವಿನ ಜೋಳದ ಬೆಳೆಯನ್ನು ಆರೋಪಿತರು ಎತ್ತಿನ ಗಳೆಯಿಂದ ಹಾಳು ಮಾಡಿರುತ್ತಾರೆ. ಸುಮಾರು ಅಂದಾಜು ರೂ.30,000/- ಬೆಳೆಯನ್ನು ಹಾಳು ಮಾಡಿರುತ್ತಾರೆ. ನಾನು ನ್ಯಾಯಾಲಯದ ತಡೆಯಾಜ್ಞೆ ಇರುವ ಬಗ್ಗೆ ಆರೋಪಿತರಿಗೆ ತಿಳಿಸಿದಾಗ, ಅವರು ತಡೆಯಾಜ್ಞೆಯನ್ನು ಉಪ್ಪು ಹಾಕಿ ನೆಕ್ಕಿಕೋ ನಾವು ಬೆಳೆಯನ್ನು ಹಾಳು ಮಾಡುತ್ತೇವೆಂದು ಅವಾಚ್ಯವಾಗಿ ಬೈದಿರುತ್ತಾರೆ. ಈ ಸಲ ಬೆಳೆಯನ್ನು ಹಾಳು ಮಾಡಿರುತ್ತೇವೆ. ಇನ್ನೊಮ್ಮೆ ಬಂದರೆ ನಿನ್ನನ್ನು ಕೊಲೆ ಮಾಡುತ್ತೇವೆಂದು ಜೀವ ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಚಾಸಾ.4 ರಿಂದ ಚಾಸಾ.6 ರವರು ನನ್ನೊಂದಿಗೆ ಇದ್ದರು. ಚಾಸಾ.6 ರವರು ಘಟನೆಯನ್ನು ಮೊಬೈಲನಲ್ಲಿ ಚಿತ್ರಿಸಿಕೊಂಡಿರುತ್ತಾನೆ. ಆ ಚಿತ್ರಣವನ್ನು ಸಿ.ಡಿ.ಯಲ್ಲಿ ಹಾಕಿ ಪೋಲಿಸರಿಗೆ ನೀಡಿರುತ್ತೇವೆ. ಆರೋಪಿತರು ನಮಗೆ ನೀವೇನಾದರೂ ದೂರು ನೀಡಿದ್ದಲ್ಲಿ, ನಿಮ್ಮ ಮನೆಯನ್ನು ಬೆಂಕಿ ಹಚ್ಚಿ ಕೊಲೆ ಮಾಡುತ್ತೇವೆಂದು ನುಡಿದಿರುತ್ತಾರೆ. ಗೋವಿನ ಜೋಳದ ಬೆಳೆಯು ಸುಮಾರು 1 ರಿಂದ $1^{1/2}$ ಅಡಿ ಎತ್ತರ ಬೆಳೆದಿತ್ತು. ಆ ಬೆಳೆಯನ್ನು ನಾವೇ ಬೆಳೆದಿದ್ದೆವು. ಈ ಘಟನೆ ಜರುಗುವ ಪೂರ್ವದಲ್ಲಿ ಹನಮಸಾಗರ ಪೋಲಿಸ್ ಠಾಣೆಗೆ ಆರೋಪಿತರನ್ನು ಕರೆಸಿ, ನಮ್ಮ ಹೊಲ ಸರ್ವೆ ಸಂಖ್ಯೆ:50 ಹಿಸ್ಸಾ-6, 2 ಎಕರೆ 25 ಗುಂಟೆ ಜಮೀನಿಗೆ ತಡೆಯಾಜ್ಞೆ ಇರುವ ಬಗ್ಗೆ ಆರೋಪಿತರಿಗೆ ತಿಳಿಸಿ, ಅಲ್ಲಿ ಹೋಗದಂತೆ ಪೋಲಿಸರು ಹಿಂಬರಹವನ್ನು ಬರೆಸಿಕೊಂಡಿರುತ್ತಾರೆ. ಈ ಘಟನೆ ಜರುಗಿದ 2 ದಿನಗಳು ತಡವಾಗಿ ಎಸ್.ಪಿ. ಕಛೇರಿ ಕೊಪ್ಪಳಕ್ಕೆ ಹೋಗಿದ್ದು, ಅವರ ಸಲಹೆಯ ಮೇರೆಗೆ ಹನಮಸಾಗರ ಠಾಣೆಗೆ ಬಂದು ದೂರು ನೀಡಿರುತ್ತೇವೆ. ದೂರನ್ನು ದಿನಾಂಕ:07.07.2015

ರಂದು ನೀಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ತೋರಿಸಿದ ಗೋವಿನ ಜೋಳದ ಬೆಳೆಯು ಆ ದಿನ ಆರೋಪಿತರು ಹಾಳು ಮಾಡಿದ ಬೆಳೆಯಾಗಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿದಾಗ, ತಮ್ಮ ಪಾಟೀ ಸವಾಲಿನಲ್ಲಿ, ನಮಗೆ ಮತ್ತು ಆರೋಪಿತರ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿ. ಆರೋಪಿತರಿಗೆ ಮತ್ತು ನಮ್ಮ ನಡುವೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪಾಲುವಾಟ್ನಿಗಾಗಿ ವ್ಯಾಜ್ಯ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು, ಆರೋಪಿತರು ತಕರಾರು ಕೊಡಬಾರದೆಂದು ಇದೇ ನ್ಯಾಯಾಲಯದಲ್ಲಿ ಆರೋಪಿತರ ವಿರುದ್ಧ ಅಸಲು ದಾವೆ ಸಂಖ್ಯೆ:02/2012 ದಾಖಲಿಸಿರುತ್ತೇನೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದೇ ರೀತಿ ಈ ಪ್ರಕರಣ ದಾಖಲಿಸುವ ಮೊದಲು ಆರೋಪಿತರು ಕೂಡ ನಮ್ಮ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಸಾಕ್ಷ್ಯದ ಭಾಗದಿಂದ ತಿಳಿದುಬರುವುದೇನೆಂದರೆ ಆರೋಪಿತರು ಮತ್ತು ಫಿರ್ಯಾದಿದಾರರ ನಡುವೆ ಜಮೀನಿನ ಕುರಿತು ಸಿವಿಲ್ ವಿವಾದ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ದ್ವೇಷ ಭಾವನೆಯಿಂದ ಆರೋಪಿತರ ವಿರುದ್ಧ ದೂರು ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಫಿರ್ಯಾದಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಘಟನೆಯ ಕಾಲಕ್ಕೆ ಚಾಸಾ.6 ರವರು ತನ್ನೊಂದಿಗೆ ಇದ್ದರು ಎಂದು ನುಡಿದಿದ್ದು, ಆದರೆ ನಿಪಿ.1 ದೂರಿನ 2 ನೇ ಪುಟದಲ್ಲಿ ತಾನು ಚಾಸಾ.4 ಮತ್ತು ಚಾಸಾ.5 ರವರು ಮಾತ್ರ ಘಟನಾ ಸ್ಥಳದಲ್ಲಿರುವುದಾಗಿ ನಮೂದಿಸಿರುತ್ತಾರೆ. ಈ ರೀತಿ ಮುಖ್ಯ ವಿಚಾರಣೆ ಮತ್ತು ದೂರಿನ ಅಂಶಗಳಿಗೆ ವ್ಯತಿರಿಕ್ತ ಸಾಕ್ಷ್ಯ ನುಡಿದಿರುತ್ತಾರೆ. ಇನ್ನುಳಿದಂತೆ ಆರೋಪಿ ಪರ

ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಪ್ರಾಸಾ.1 ರವರು ಅಲ್ಲಗಳೆದಿರುತ್ತಾರೆ.

**14. ಈ ಪ್ರಕರಣದ ಸಾಕ್ಷಿದಾರರಾದ ಹಾಗೂ ಪ್ರಾಸಾ.1 ರವರ ಸಹೋದರನಾದ ಚಾಸಾ.4 ಭೀಮಪ್ಪ ರವರನ್ನು ಪ್ರಾಸಾ.2 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿದ್ದು,** ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ನನ್ನ ಅಣ್ಣ, ಚಾಸಾ-5 ನನ್ನ ತಾಯಿ, ಚಾಸಾ-6 ನನ್ನ ತಮ್ಮ, ಚಾಸಾ-2 ಮತ್ತು 3 ರವರ ಪರಿಚಯವಿದೆ ಮತ್ತು ಅವರುಗಳು ನಮ್ಮ ಊರಿನವರು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. 2015 ರಲ್ಲಿ ಆರೋಪಿತರು ಮತ್ತು ಅವರ ಮಕ್ಕಳಾದ ಮಹಾಂತಪ್ಪ ಮತ್ತು ಭೀಮಪ್ಪ ರವರುಗಳು ಹಿರೇಗೊನ್ನಾಗರ ಸೀಮಾದಲ್ಲಿರುವ ನಮ್ಮ ಮಾಲೀಕತ್ವದ ಸರ್ವೆ ನಂಃ 50/6 ವಿಸ್ತೀರ್ಣ 2 ಎಕರೆ 25 ಗುಂಟೆ ಜಮೀನಿಗೆ ಬಂದು ನಾನು ಬಿತ್ತಿ ಬೆಳೆದಿದ್ದ ಮೆಕ್ಕೆಜೋಳ ಫಸಲಿನ ಮೇರೆಗೆ ಅರಗುತ್ತಿದ್ದರು. ಹಾಗೆ ಅರಗುತ್ತಿದ್ದಾಗ ನಾನು, ಚಾಸಾ-1, ಚಾಸಾ-5 ಮತ್ತು ಚಾಸಾ-6 ರವರುಗಳು ಅಲ್ಲಿಗೆ ಹೋಗಿ ಅರಗುತ್ತಿದ್ದುದನ್ನು ಪ್ರಶ್ನಿಸಿದಾಗ ಆರೋಪಿತರುಗಳು ಸದರಿ ಜಮೀನು ತಮಗೆ ಸೇರಿದ್ದು ಮತ್ತು ಇದರ ಮೇಲೆ ನಿಮ್ಮದು ಏನು ಅಧಿಕಾರಿ ಇದೆ ಎಂದು ಹೇಳಿರುತ್ತಾರೆ. ಅದಕ್ಕೆ ನಾವು ಸದರಿ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಮತ್ತು ಅದು ನಮ್ಮ ಹೊಲ ಎಂದು ಹೇಳಿರುತ್ತೇವೆ. ಆಗ ಆರೋಪಿತರುಗಳು ನಿಮ್ಮ ಹೊಲ ಎಲ್ಲಿದೆ ಬೋಸುಡಿ ಮಕ್ಕಳಾ ಎಂದು ಬೈದು ನಮ್ಮನ್ನು ಕೊಲೆ ಮಾಡುವುದಾಗಿ ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರುಗಳು ನಾವು ಬೆಳೆದಿದ್ದ ರೂ.30,000/- ಮೌಲ್ಯದ ಬೆಳೆಯನ್ನು ಅರಗಿ ನಾಶ ಮಾಡಿರುತ್ತಾರೆ. ಹಾಗೆ ನಾಶ ಮಾಡಿದ ನಂತರ ನಾವುಗಳು ಹನಮಸಾಗರ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ಫಿರ್ಯಾದನ್ನು ನೀಡಿರುತ್ತೇವೆ. ಸದರಿ ದಿನ ಆರೋಪಿತರು ನಮ್ಮ ಜಮೀನಿಗೆ ಬಂದು ಅರಗಿ ಹಾಳು ಮಾಡಿದ್ದ ಬೆಳಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.2 ರವರನ್ನು ಪಾಟೀ ಸವಾಲು ಮಾಡಿದಾಗ, ತಮ್ಮ ಪಾಟೀ ಸವಾಲಿನಲ್ಲಿ, ಫಿರ್ಯಾದಿದಾರರ ಕುಟುಂಬಕ್ಕೂ ಮತ್ತು

ಆರೋಪಿತರ ಕುಟುಂಬಕ್ಕೂ ಸದರಿ ಪ್ರಕರಣದ ಪೂರ್ವದಿಂದಲೂ ಜಮೀನಿನ ವಿವಾದ ಕುರಿತು ದ್ವೇಷಭಾವನೆ ಇರುವುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಇನ್ನುಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಪ್ರಾಸಾ.2 ರವರು ಅಲ್ಲಗಳೆದಿರುತ್ತಾರೆ.

**15. ಈ ಪ್ರಕರಣದ ಮಹಜರು ಸಾಕ್ಷಿದಾರರಾದ ಚಾಸಾ.3 ಯಲ್ಲಪ್ಪ ರವರನ್ನು ಪ್ರಾಸಾ.3 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿದ್ದು,** ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.1, ಚಾಸಾ.2, ಚಾಸಾ.4 ರಿಂದ ಚಾಸಾ.6 ಮತ್ತು ಆರೋಪಿತರ ಪರಿಚಯವಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಸುಮಾರು 4 ವರ್ಷಗಳ ಹಿಂದೆ ತುಮರಿಕೊಪ್ಪ ಗ್ರಾಮದಲ್ಲಿನ ನನ್ನ ಜಮೀನಿನಿಂದ ನರಸಾಪೂರಕ್ಕೆ ಹೋಗುತ್ತಿರುವಾಗ ಪೋಲಿಸರು ನನ್ನನ್ನು ಕರೆದು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಹಲ್ಲೆ ಘಟನೆಯ ಜಾಗದ ಕುರಿತು ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ. ಚಾಸಾ.4 ರವರು ನನ್ನ ಸಮಕ್ಷಮ ಯಾವುದೇ ತಕ್ಷೀರು ಸ್ಥಳವನ್ನು ತೋರಿಸಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು.1 ನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದಾರೆ.

ಈ ಮೇಲಿನಂತೆ ಪ್ರಾಸಾ.3 ರವರು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಪ್ರಾಸಾ.3 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಸಹಿತ ತನ್ನ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತಗೆಯುವಲ್ಲಿ ವಿಫಲರಾಗಿರುತ್ತಾರೆ.

**16. ಈ ಪ್ರಕರಣದ ಇನ್ನೊಬ್ಬ ಸಾಕ್ಷಿದಾರರಾದ ಹಾಗೂ ಪ್ರಾಸಾ.1 ರವರ ಸಹೋದರನಾದ ಚಾಸಾ.6 ಜಾಣಪ್ಪ ರವರನ್ನು ಪ್ರಾಸಾ.4 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿದ್ದು,** ಪ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ರಿಂದ 5 ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಪರಿಚಯ ಇರುತ್ತದೆ. ಸುಮಾರು 10 ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಮೇಕ್ಕೆ ಜೋಳದ ಬೆಳೆ ಬೆಳೆದಾಗ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿತರು ನಮ್ಮ ಜಮೀನಿಗೆ ಬಂದು ಹರಗಿ ಬೆಳೆ ನಾಶಪಡಿಸಿರುತ್ತಾರೆ. ಈ ಕುರಿತು ವಿಚಾರಿಸಿದಾಗ ಆರೋಪಿತರು ನಮಗೆ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಮತ್ತು ಹೋಗುವಾಗ ಆರೋಪಿತರು ನಮ್ಮ ಸಾಯಿಸುವುದಾಗಿ ಜೀವೆ ಬೆದರಿಕೆ ಹಾಕಿರುತ್ತಾರೆ. ನಮ್ಮದು ರೂ.30,000/- ಬೆಳೆ ಆರೋಪಿತರು ನಾಶಪಡಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದಿರುವ ಮೆಕ್ಕೆ ಜೋಳದ ಬೆಳೆಯ ಮುದ್ದೆ ಮಾಲನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.4 ರವರನ್ನು ಪಾಟೀ ಸವಾಲು ಮಾಡಿದಾಗ, ತಮ್ಮ ಪಾಟೀ ಸವಾಲಿನಲ್ಲಿ, ಆರೋಪಿತರು ಮತ್ತು ನಮ್ಮ ವಿರುದ್ಧ ಅಪರಾಧಿಕ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇನ್ನುಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಪ್ರಾಸಾ.4 ರವರು ಅಲ್ಲಗಳೆದಿರುತ್ತಾರೆ.

**17. ಈ ಪ್ರಕರಣದ ಮತ್ತೊಬ್ಬ ಸಾಕ್ಷಿದಾರರಾದ ಹಾಗೂ ಪ್ರಾಸಾ.1 ರವರ ತಾಯಿಯಾದ ಚಾಸಾ.5 ರುದ್ರಮ್ಮ ರವರನ್ನು ಪ್ರಾಸಾ.5 ಎಂದು ಸಾಕ್ಷಿ ವಿಚಾರಣೆಗೊಳಪಡಿಸಿದ್ದು,** ಪ್ರಾಸಾ.5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ರಿಂದ 4 ಮತ್ತು ಚಾಸಾ.6 ರವರ ಪರಿಚಯ ಇರುತ್ತದೆ. ಈಗ ಸುಮಾರು 11 ವರ್ಷಗಳ ಹಿಂದೆ ಆರೋಪಿತರು ನಮ್ಮ ಜಮೀನಿಗೆ ನುಗ್ಗಿ ಮೆಕ್ಕೆ ಜೋಳ ಬೆಳೆಯನ್ನು

ಹರಗಿ ಹಾಳು ಮಾಡಿರುತ್ತಾರೆ ಮತ್ತು ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಮತ್ತು ನಮ್ಮ ಮನೆಗೆ ಬೆಂಕಿ ಹಚ್ಚುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ. ಈ ರೀತಿ ರೂ.30,000/- ಮೆಕ್ಕೆ ಜೋಳ ಬೆಳೆ ಹಾನಿ ಮಾಡಿರುತ್ತಾರೆ. ನನ್ನ ಮಗ ಈ ಕುರಿತು ದೂರು ನೀಡಿರುತ್ತಾರೆ. ಪೋಲಿಸರು ಈ ಕುರಿತು ನನ್ನನ್ನು ವಿಚಾರಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದಿರುವ ಮೆಕ್ಕೆ ಜೋಳದ ಬೆಳೆಯನ್ನು ನೋಡಿ ಮುದ್ದೆ ಮಾಲು.1 ಎಂದು ಗುರುತಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.5 ರವರನ್ನು ಪಾಟೀ ಸವಾಲು ಮಾಡಿದಾಗ, ತಮ್ಮ ಪಾಟೀ ಸವಾಲಿನಲ್ಲಿ, ಆರೋಪಿತರು ಮತ್ತು ತಮ್ಮ ನಡುವೆ ಸಿವಿಲ್ ವ್ಯಾಜ್ಯ ಬಾಕಿಯಿರುತ್ತದೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿಯುತ್ತಾರೆ. ಇನ್ನುಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಪ್ರಾಸಾ.5 ರವರು ಅಲ್ಲಗಳೆದಿರುತ್ತಾರೆ.

## ENMITY

**18.** ಈ ಸಮಯದಲ್ಲಿ ಸರ್ವೋಚ್ಛ ನ್ಯಾಯಾಲಯದ ಈ ತೀರ್ಪನ್ನು ಅನ್ವಯಸುವುದು ಸೂಕ್ತವೆನಿಸುತ್ತದೆ. **Ramshish Ray Vs.Jagadish Singh 2005 Criminal Law Journal 669(SC)** ಈ ಪ್ರಕರಣದಲ್ಲಿ ದ್ವೇಷ (Enmity) ಎಂಬುದು ಎರಡು ಹರಿತವಾದ ತುದಿಗಳನ್ನು ಹೊಂದಿರುವ ಖಡ್ಗ ಎಂಬುದು ಸ್ಥಾಪಿತವಾದ ಕಾನೂನಿನ ತತ್ವವಾಗಿದೆ. ಆದ್ದರಿಂದ, ಶತ್ರು ಸಾಕ್ಷಿಗಳನ್ನು ಪರೀಕ್ಷಿಸುವ ಸಮಯದಲ್ಲಿ ನ್ಯಾಯಾಲಯವು ಅಗತ್ಯ ಎಚ್ಚರಿಕೆಗಳನ್ನು ವಹಿಸಬೇಕಾದ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಮುಂದುವರೆದು, **Deleep Singh Vs State AIR 1997 (SC) 2245** ಈ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ಶತ್ರು ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿಗಳು , ವೈದ್ಯಕೀಯ ಸಾಕ್ಷಿ ಮತ್ತು ಇತರೆ ಸಾಕ್ಷಿಗಳಿಂದ ಪುಷ್ಟೀಕರಿಸಿದರೆ ಆ ಸಮಯದಲ್ಲಿ ಶತ್ರು ಸಾಕ್ಷಿಯನ್ನು ಅವಲಂಬಿಸಿ ಆರೋಪಿಗಳ ವಿರುದ್ದ ಪ್ರಕರಣಗಳನ್ನು ನಿರ್ಣಾಯತೀತವಾಗಿ ರುಜುವಾತುಪಡಿಸಬಹುದಾಗಿರುತ್ತದೆ ಎಂದು ತೀರ್ಪು ನಿಡಿರುತ್ತದೆ.

**19.** ಸದರಿ ಪ್ರಕರಣದಲ್ಲಿ ಇತರೆ ಸಾಕ್ಷಿಗಳನ್ನು ಪರಿಶೀಲಿಸಿದಾಗ, ಶತ್ರು ಸಾಕ್ಷಿಗಳನ್ನು ಪುಷ್ಠೀಕರಿಸುವ ಅಂಶಗಳು ಕಂಡುಬಂದಿರುವುದಿಲ್ಲ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲ ಸಲಹೆಗಳನ್ನು ಮತ್ತು ಹಾರಿಕೆಯ ನಿರಾಕರಣೆಗಳನ್ನು ಫ್ರಾಸಾ.1 ರವರು ಅಲ್ಲಗಳೆದಿರುತ್ತಾರೆ. ಇನ್ನುಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆಯ ನಿರಾಕರಣೆಗಳನ್ನು ಫ್ರಾಸಾ.1 ರಿಂದ ಫ್ರಾಸಾ.5 ರವರು ಅಲ್ಲಗಳೆದಿರುತ್ತಾರೆ.

**20.** ಈ ಮೇಲ್ಕಂಡ ಅಂಶಗಳನ್ನು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿದಾಗ ಫ್ರಾಸಾ-1 ರಿಂದ 5 ರವರ ಸಾಕ್ಷ್ಯಗಳ ಬಗ್ಗೆ ವ್ಯತಿರಿಕ್ತ ಅಂಶಗಳು ಕಂಡುಬಂದಿದ್ದು ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಆರೋಪಿತರೇ ಈ ಸದರಿ ಅಪರಾಧವನ್ನು ಎಸಗಿರುತ್ತಾರೆ ಎಂದು ನಂಬುವುದು ಅಸ್ಪಷ್ಟವಾಗಿದ್ದು ಮತ್ತು ಆರೋಪಿತರೇ ಅಪರಾಧ ಎಸಗಿರುತ್ತಾರೆ ಎಂದು ಖಚಿತ ಅಭಿಪ್ರಾಯಕ್ಕೆ ಬರಲು ಸಾಕ್ಷ್ಯದಾರಗಳಿಂದ ಸಂಶಯ ಉಂಟಾಗಿರುತ್ತದೆ. ಸದರಿ ಸಂಶಯದ ಲಾಭವನ್ನು ಆರೋಪಿತರು ಪಡೆಯಲು ಅರ್ಹರಾಗಿರುತ್ತಾರೆ. ಕಡತದಲ್ಲಿನ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ್ದು, ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. **ಆದ್ದರಿಂದ ಅಂಶ 1 ರಿಂದ 4 ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

**21.** **ಅಂಶ 5:-** ಅಂಶ **1** ರಿಂದ **4** ಕ್ಕೆ ಈ ಮೇಲ್ಕಂಡಂತೆ ಉತ್ತರಿಸಿರುವುದರಿಂದ ಈ ಕೆಳಕಂಡಂತೆ:

# ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ಮತ್ತು 2ನೇ ಆರೋಪಿತರನ್ನು **ಭಾರತೀಯ ದಂಡ ಸಂಹಿತೆ ಕಲಂ. 427, 447, 504** ಮತ್ತು **506** ಸಹ **ಕಲಂ.34** ರಡಿಯಲ್ಲಿ ಮಾಡಲಾದ ಆರೋಪಗಳಿಂದ ಈ ಕೂಡಲೇ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಮು.ಮಾ-1 ಮೆಕ್ಕೆ ಜೋಳದ ದಂಟುಗಳು ಸುಮಾರು 2 ಅಡಿ ಎತ್ತರವಿದ್ದು ಬೆಲೆಬಾಳದ ಸ್ವತ್ತು ಆಗಿದ್ದು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ಮು.ಮಾ-2 ಒಂದು ಸಿಡಿ ಬೆಲೆಬಾಳದ ಸ್ವತ್ತು ಆಗಿದ್ದು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿನ 1 ಮತ್ತು 2ನೇ ಆರೋಪಿತರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಈ ತೀರ್ಪು ನೀಡಿದ 6 ತಿಂಗಳ ನಂತರ ರದ್ದಾಗುವುದು ಎಂದು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಖ್ತಲೇಖನವನ್ನು ನೀಡಿದ್ದು, ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ, ಪರಿಶೀಲಿಸಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 01ನೇ ಜೂನ್ 2026 ರಂದು ಘೋಷಿಸಲಾಯಿತು.)

MAHANTESH RAYAPPA CHOULAGI

Digitally signed by MAHANTESH RAYAPPA CHOULAGI
Date: 2026.06.03 12:13:03 +0530

**(ಮಹಾಂತೇಶ ಚೌಲಗಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,ಗಳು ಕುಷ್ಟಗಿ.**

# ಅನುಬಂಧ

## ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-

| ಕ್ರಮ ಸಂಖ್ಯೆ | | ಶ್ರೇಣಿ | ಹೆಸರು | ಸಾಕ್ಷ್ಯದ ಸ್ವರೂಪ |
|---|---|---|---|---|
| 1 | | ಪ್ರಾಸಾ-1 | ಮಲ್ಲಪ್ಪ | ಫಿರ್ಯಾದುದಾರರು |
| 2 | | ಪ್ರಾಸಾ-2 | ಭೀಮಪ್ಪ | ಸಾಕ್ಷಿದಾರರು |
| 3 | | ಪ್ರಾಸಾ-3 | ಯಲ್ಲಪ್ಪ | ಪಂಚ ಸಾಕ್ಷಿದಾರರು |
| 4 | | ಪ್ರಾಸಾ-4 | ಜಾಣಪ್ಪ | ಸಾಕ್ಷಿದಾರರು |
| 5 | | ಪ್ರಾಸಾ-5 | ರುದ್ರಮ್ಮ | ಸಾಕ್ಷಿದಾರರು |

## ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳು:-

| ಕ್ರಮ ಸಂಖ್ಯೆ | ನಿಶಾನೆಗಳ ಸಂಖ್ಯೆ | | ವಿವರಣೆ |
|---|---|---|---|
| 1 | ನಿ ಪಿ 1 | | ದೂರು |
| 2 | ನಿ ಪಿ 2 | | ಗುನ್ನೆ ಜಾಗ ಪಂಚನಾಮೆ |

## 3. ಆರೋಪಿ/ತರ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-

---- ಇಲ್ಲ ----

**4. ಆರೋಪಿ/ತರ ಪರ ಹಾಜರುಪಡಿಸಿದ ದಾಖಲೆಗಳು:-**

---- ಇಲ್ಲ -----

**5. ನ್ಯಾಯಾಲಯದ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-**

---- ಇಲ್ಲ ----

**6. ನ್ಯಾಯಾಲಯದ ಪರ ಹಾಜರುಪಡಿಸಿದ ದಾಖಲೆಗಳು:-**

---- ಇಲ್ಲ ----

**ಅಭಿಯೋಜನೆಯ ಪರ ಗುರುತು ಮಾಡಿದ ಮುದ್ದೆ ಮಾಲುಗಳು:-**

| | | |
|---|---|---|
| ಮುಮಾ-1 | | 2 ಅಡಿ ಎತ್ತರದ ಮೆಕ್ಕೆಜೋಳದ ದಂಟು |

01.06.2026
**(ಮಹಾಂತೇಶ ಚೌಲಗಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,ಗಳು ಕುಷ್ಟಗಿ.**